

ಸೃಷ್ಟಿಯಾಗಬಾರದೆಂಬ ಮುನ್ನೆಚ್ಚರಿಕೆಯಿಂದ ಬಾಯಿಗೆ ಬೀಗ ಹಾಕಿಕೊಂಡು, ಅಥವಾ 'ನಿಮಗೆ ಏನೂ ಗೊತ್ತಾಗಲ್ಲ' ಎನ್ನುವ ಮಾತು ಬರೆ ಹಾಕಿದಂತಾಗಿತ್ತೇ? ಅಹಂಕಾರಕ್ಕೋ, ಸ್ವಾಭಿಮಾನಕ್ಕೋ ಪೆಟ್ಟು? 'ನೀವು ತಂದಿದ್ದು ಹೌದೇ ಹೌದಾ?' ಎನ್ನುವ ತನಿಖೆ ಆರಂಭವಾದರೆ ತಮಗೇ ಹಿಂಸೆ. ಮುಜುಗರ. ಪಂಕಜಾಕ್ಷಿ ಬಿಸಿತುಪ್ಪವನ್ನು ಬಾಯಲ್ಲಿಟ್ಟುಕೊಂಡು ವಾಪಸು ಬಂದಿದ್ದರು.

***

'ನಿಂಗೆ ನಯಾಪೈಸೆ ಬುದ್ಧಿ ಇಲ್ಲ. ಬೇಡದ ಪಾರುಪತ್ಯ ಮಾಡೋಕೆ ಹೋಗ್ತಿ' ಮಗಳು ಬೈದಿದ್ದಳು, ಎಲ್ಲಾ ಕೇಳಿಸಿಕೊಂಡ ಮೇಲೆ.

'ಅನ್ಯಾಯವಾಗಿ ಕಳ್ಕೊಂಡು ಬಂದ್ನಲ್ಲೇ, ಹೊಟ್ಟೆ ಉರೀತಿದೆ ನಂಗೆ' ಕಣ್ಣಲ್ಲಿ ಗಂಗಾಭವಾನಿ.

'ಹೋಗ್ಲಿ ಬಿಡು. ಆಗಿದ್ದು ಆಗೋಯ್ತಲ್ಲ...'

'ಕದ್ದೋಳಿಗೆ ನೀಲ ಆಗಿ ಬರದಿದ್ರೆ ತೋರಿಸುತ್ತೆ ಪ್ರಭಾವ'.

'ತೋರಿಸುತ್ತೆ, ತೋರಿಸುತ್ತೆ. ಕಾಯ್ಕೊಂಡು ಕೂತಿರು...'

'ನಿನ್ನಪ್ಪನ ಹತ್ರ ಹೇಳಲೇನೆ? ಅಥವಾ ಬೇಡ್ವಾ?'

'ಬೇಡ ಬಿಡು. ಅವರ ತಲೇನೂ ಯಾಕೆ ಕೆಡಿಸಿಡ್ತಿ? ಅವರು ಮಗನ ಹತ್ರ ಹೇಳೋದು, ಅಲ್ಲಿ ವಿಚಾರಣೆ ಶುರುವಾಗೋದು, ಹೋಗಿದ್ದು ಹೋಯ್ತು ಅಂದ್ಕೊಂಡು ಬಾಯಿಗೆ ಕಡುಬು ತುಂಬ್ಕಂಡು ತೆಪ್ಪಗಿದ್ಬಿಡು'.

'ಹಂಗಂತೀಯಾ?'

'ಹೌದು. ಸಂದರ್ಭ ಬಂದ್ರೆ ಹೇಳಿದ್ರಾಯ್ತು. ಅವರ ಮನೆ, ಅವರ ಸಂಸಾರ. ಅವರು ನೋಡ್ಕೋತಾರೆ...'

ಮಗಳು ಏನೇ ಹೇಳಿದರೂ ತಾನು ಮಾಡಿದ್ದು ಸರಿಯೋ, ತಪ್ಪೋ ಎನ್ನುವ ದ್ವಂದ್ವ ತಿಂಗಳುಗಟ್ಟಲೆ ಮನಸ್ಸನ್ನು ಕೊರೆಯುತ್ತಿತ್ತು. ಸಮಾಧಾನ ಮಾಡಿಕೊಳ್ಳುತ್ತಿದ್ದರು ಪಂಕಜಾಕ್ಷಿ. ಮಗಳು ಹೇಳಿದ ಹಾಗೆ ಅವರ ಮನೆ, ಅವರ ಸಂಸಾರ

***

'ಕತೆ ಮುಗಿಯಿತು' ಅಂದರೆ ಮುಗಿಯಲಿಲ್ಲ. ಸಣ್ಣದೊಂದು ಅವಗಣನೆಗೆ ದೊಡ್ಡ ಬೆಲೆ ತೆರಬೇಕಾಯ್ತು. ತಂಗಿಯ ಮದುವೆಗೆಂದು ಲಾಕರಿನಿಂದ ತಂದುಕೊಂಡ ಚಿನ್ನವನ್ನು ಸೊಸೆ ವಾಪಸು ಇಡಲು ಕೊಂಚ ತಡ ಮಾಡಿದಳು. ಕೊಂಚ ಅಂದರೆ ಒಂದೆರಡು ದಿನ ಅಷ್ಟೇ. ಬೇಜವಾಬ್ದಾರಿ? ಅಥವಾ ಅತಿಯಾದ ನಂಬಿಕೆ? ಏನೋ ಒಂದು. ಲಕ್ಷಗಟ್ಟಲೆ ಚಿನ್ನ ಕಳುವಾಗಿಹೋಯ್ತು. ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರಂತೆ. ವಿಚಾರಣೆ ನಡೆಯುತ್ತಿದೆ.

'ಇದ್ದ ಮೂವರಲ್ಲಿ ಕದ್ದವರು ಯಾರು?' ಎಂದು ಸಲೀಸಾಗಿ ಹೇಳುವಂತಿಲ್ಲ ಅನ್ನುತ್ತಾಳೆ ಸೊಸೆ. ಸಣ್ಣ ಮಗು ಇರುವ ಮನೆಗೆ ಆಚೀಚಿನ ಮನೆಯ ಮಕ್ಕಳು ಆಟವಾಡಲು ಹಂಬಲಿಸಿಕೊಂಡು ಬರುವುದಿದೆ. ಅದರಲ್ಲೂ ಹೆಣ್ಮಕ್ಕಳಿಗೆ ಈ ಅಂಬೆಗಾಲು ಕೃಷ್ಣನ ಮೇಲೆ ಅತಿಶಯ ಪ್ರೀತಿ. ಈ ಮನೆಗೆ ಬಂದ ಮಕ್ಕಳನ್ನು ಕರೆದುಕೊಂಡು ಹೋಗಲು ಅವರ ಅಮ್ಮಂದಿರು ಬರುವುದಿದೆ. ಮಗುವಿನ ಅಮ್ಮ ಮನೆಯಲ್ಲಿದ್ದರೆ ಲೋಕಾಭಿರಾಮದ ಎರಡು ಮಾತಾಡಿಕೊಂಡು ಹೋಗುವುದಿದೆ.

'ಗುರುತು ಪರಿಚಯ ಇಲ್ಲದವರನ್ನ ಮನೆಗೆ ಸೇರಿಸ್ಬಾರ್ದು' ಎಂದು ಕಟ್ಟುನಿಟ್ಟು ಮಾಡಿದ್ದರೂ ಗುರುತು ಪರಿಚಯ ಇರುವವರಿಗೆ ಈ ನಿಷೇಧ ಇಲ್ಲ. ಕದಿಯುವಂಥ ಹೀನಸ್ಥಿತಿ ಅಥವಾ ಮನೋಸ್ಥಿತಿ ಅಂಥವರದ್ದಲ್ಲ ಎಂದು ಖಾತ್ರಿಯಾಗಿ ನಂಬಿದ್ದಾಳೆ ಸೊಸೆ. ಅವನ್ನೇನು ಎಲ್ಲರಿಗೂ ಕಾಣುವಂತೆ ಪ್ರದರ್ಶನಕ್ಕಿಟ್ಟಿರಲಿಲ್ಲ. ಬೀರುವಿನಲ್ಲಿ ಭದ್ರವಾಗಿ ತೆಗೆದಿಟ್ಟಿದ್ದು. ಬೀಗದ ಕೈ ಗೊಂಚಲು ಮಾತ್ರ ಯಾವಾಗಿನ ಪದ್ಧತಿಯಂತೆ ಅದರಲ್ಲೇ ನೇತಾಡುತ್ತಿದ್ದುದು ಕೆಲಸಕ್ಕೆ ಹೊರಡುವ ಅವಸರದಲ್ಲಿ ತಲೆ ಹೊಕ್ಕಿರಲಿಲ್ಲ. ಒಟ್ಟಿನಲ್ಲಿ ಯಾರ್ಯಾರ ಮೇಲೋ ಗುಮಾನಿ. 'ಕದಿಯುವ ರುಚಿ ಹತ್ತಿದ್ದು ತನ್ನಿಂದಾಗಿಯೇ ಇರಬಹುದೇ? ಅವತ್ತೇ ಎಲ್ಲಾ ಹೇಳಿಬಿಟ್ಟಿದ್ದರೆ ಮನೆಯವರು ಎಚ್ಚರಿಕೆಯಿಂದಿರುತ್ತಿದ್ದರೇನೋ...' ಎನ್ನುವ ಪಾಪಪ್ರಜ್ಞೆಗೆ ಪಕ್ಕಾಗಿ ಪರಿತಪಿಸುತ್ತಿದ್ದಾಳೆ ಪಂಕಜಾಕ್ಷಿ.

ನೀಲದ ಹರಳಿನ ಪ್ರಭಾವದಿಂದಲೇ ಕಳ್ಳರಿಗೆ ಮತ್ತಷ್ಟು ಕದಿಯುವ ಪ್ರಲೋಭನೆ ಹುಟ್ಟಿ, ಕಳ್ಳನೋ, ಕಳ್ಳಿಯೋ ಖೆಡ್ಡಾಕ್ಕೆ ಬೀಳುವ ಮುಹೂರ್ತ ಕೂಡಿಬಂದಿರಬಹುದೆನ್ನುವ ಸಣ್ಣ ಸಮಾಧಾನದ ಸೆಳಕಿನೊಂದಿಗೆ ಇಷ್ಟು ಹೊತ್ತಿಗೆ ಕದ್ದ ಮಾಲು ಎಲ್ಲಿಗೂ ಹೋಗಿರಬಹುದು ಎನ್ನುವ ಸಂದೇಹವೂ ಜೊತೆಗೂಡಿ, ಅವತ್ತಿನ ತನ್ನ ನಡತೆ ಸರಿಯೋ ತಪ್ಪೋ ಎನ್ನುವ ಗೋಜಲಿನಲ್ಲಿ ಸಿಕ್ಕಿ ಹಾಕಿಕೊಂಡು 'ಬಿಡೇ, ತಲೆ ಒಡೆದು ದೋಚ್ಲಿಲ್ವಲ್ಲ, ಅಷ್ಟರಮಟ್ಟಿಗೆ ಪುಣ್ಯ' ಸಂತೈಸುತ್ತಾರೆ ಗಂಡ. ಹೀಗಿರುವಾಗಲೇ ಮಗನಿಂದ ಅನಿರೀಕ್ಷಿತವಾಗಿ ಫೋನ್ ಕರೆ ಬಂತು,

'ಸಿಕ್ಹಾಕ್ಕೊಂಡ್ಲು ಅಮ್ಮಾ. ಸ್ಟೇಷನ್ನಲ್ಲಿ ಚೆನ್ನಾಗಿ ರುಬ್ಬಿದ ಮೇಲೆ ಬಾಯಿ ಬಿಟ್ಲು...'

'ಯಾರೋ?'

'ನೀವು ಆದಷ್ಟು ಬೇಗ ಹೊರಟು ಬಂದ್ಬಿಡಿ. ಆಮೇಲೆ ಎಲ್ಲಾ ಹೇಳ್ತೀನಿ. ಸದ್ಯಕ್ಕೆ ಮಗೂನ ನೋಡ್ಕೊಳ್ಳೋಕೆ ಮನೇಲೊಬ್ರು ಬೇಕಲ್ಲ?'

ಮುಖ ಮುಖ ನೋಡಿಕೊಂಡು ಹೊರಡಲು ಬೇಕಾದ ವ್ಯವಸ್ಥೆ ಮಾಡಿಕೊಂಡರು ದಂಪತಿ.

ಪ್ರತಿಕ್ರಿಯಿಸಿ: **feedback@sudha.co.in**